# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 832 (927)

2) ಸದಸ್ಯರ ಹೆಸರು : ಶ್ರೀ ಪ್ರಾಣೇಶ್ ಎಂ.ಕೆ.
(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 28-09-2020

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಕಾಡಾನೆ ಹಾವಳಿಯಿಂದ ಅನೇಕ ಕಾಫಿ, ಬಾಳೆ, ಏಲಕ್ಕಿ, ಭತ್ತ ಬೆಳೆಗಳು ಹಾಗೂ ಮನೆ ಜನರಿಗೆ ಆಗುತ್ತಿರುವ ತೊಂದರೆಯನ್ನು ತಡೆಯಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು; (ವಿವರ ನೀಡುವುದು) | ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಕಾಡಾನೆ ಹಾವಳಿಯಿಂದ ಆಗುತ್ತಿರುವ ತೊಂದರೆಯನ್ನು ತಡೆಯಲು ಕೈಗೊಂಡಿರುವ ಕ್ರಮಗಳ ವಿವರ ಈ ಕೆಳಕಂಡಂತಿದೆ.<br><br>1. ಮೂಡಿಗೆರೆ ತಾಲ್ಲೂಕಿನಲ್ಲಿ ಕಾಡಾನೆ ಹಾವಳಿ ತಡೆಯಲು ಪ್ರತಿ ವರ್ಷ ಕಾಡಾನೆ ಓಡಿಸುವ ತಂಡಗಳನ್ನು ರಚಿಸಿಕೊಂಡು, ಆನೆ ಬಂದ ಸಮಯದಲ್ಲಿ ಕಾಡಿಗೆ ಹಿಮ್ಮೆಟ್ಟಿಸುವ ಕೆಲಸ ಮಾಡಲಾಗುತ್ತದೆ.<br>2. ಮೂಡಿಗೆರೆ ವಲಯದಲ್ಲಿ ಕಾಡಾನೆಗಳು ಹಿಡುವಳಿ ಪ್ರದೇಶಕ್ಕೆ ಬರದಂತೆ 10 ಕಿ.ಮೀ. ಉದ್ದಕ್ಕೆ ಟೆಂಟಕಲ್ ಫೆನ್ಸಿಂಗ್ ನಿರ್ಮಿಸಲಾಗಿದೆ.<br>3. ಮೂಡಿಗೆರೆ ವಲಯದಲ್ಲಿ ಕಾಡಾನೆಗಳು ದಾಟದಂತೆ ಆನೆ ತಡೆ ಕಂದಕ ತೆಗೆಯಲಾಗಿದೆ ಹಾಗೂ ಅವುಗಳ ನಿರ್ವಹಣೆಯನ್ನು ಮಾಡಲಾಗುತ್ತಿದೆ.<br>4. ರೈತರ ಜಮೀನಿಗೆ ಆನೆಗಳು ಪ್ರವೇಶಿಸದಂತೆ ಸೋಲಾರ್ ಫೆನ್ಸಿಂಗ್ ನಿರ್ಮಾಣ ಮಾಡಿಕೊಡಲಾಗಿದೆ.<br>5. ಕಾಡಾನೆಗಳು ಹಿಡುವಳಿ ಪ್ರದೇಶಕ್ಕೆ ಬರದಂತೆ ಆರ್.ಸಿ.ಸಿ. ಪಿಲ್ಲರ್ಸ್ ನಿರ್ಮಿಸಲಾಗಿದೆ.<br>6. ಕಾಡಾನೆ ಓಡಿಸುವ ತಂಡಕ್ಕೆ ಶೆಲ್ಟರ್ ಸ್ಟೇಷನ್‌ಗಳನ್ನು ನಿರ್ಮಿಸಲಾಗಿದೆ.<br>7. ಕಾಡಿನ ಮಧ್ಯದಲ್ಲಿ ಹಳೆಯ ಕೆರೆಗಳ ಹೂಳೆತ್ತುವುದು ಹಾಗೂ ಕೆರೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಆ)</td><td>ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನಲ್ಲಿ ಕಾಡಾನೆ ಹಾವಳಿ ತಡೆಯಲು ಸರ್ಕಾರ ಇಲ್ಲಿಯವರೆಗೆ ಯಾವ ಯೋಜನೆ ರೂಪಿಸಿದೆ; ಹಾಗಾದಲ್ಲಿ, ಈ ಯೋಜನೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ; ಈ ಯೋಜನೆಯ ಹೆಸರೇನು; ಈ ಕಾಮಗಾರಿ ಯಾವಾಗ ಆರಂಭವಾಗುತ್ತದೆ;<br>(ವಿವರ ನೀಡುವುದು)</td><td>ಚಿಕ್ಕಮಗಳೂರು ವಿಭಾಗದಲ್ಲಿ ಕಾಡಾನೆ ಹಾವಳಿ ತಡೆಯಲು ಆನೆಯೋಜನೆ ಮತ್ತು ಮಾನವ-ಪ್ರಾಣಿ ಸಂಘರ್ಷ ಯೋಜನೆ ರೂಪಿಸಲಾಗಿದೆ ಹಾಗೂ ಸದರಿ ಯೋಜನೆಗಳಿಗೆ 2016–17ನೇ ಸಾಲಿನಿಂದ ಬಿಡುಗಡೆಗೊಳಿಸಲಾದ ಅನುದಾನದ ವಿವರ ಈ ಕೆಳಕಂಡಂತಿದೆ:
<table>
<tr><th>ಕ್ರ ಸಂ.</th><th>ವರ್ಷ</th><th>ಶೀರ್ಷಿಕೆ</th><th>ಬಿಡುಗಡೆಗೊಳಿಸಿದ ಅನುದಾನ (ರೂ.ಲಕ್ಷಗಳಲ್ಲಿ)</th></tr>
<tr><td rowspan="2">1.</td><td rowspan="2">2016–17</td><td>ಆನೆ ಯೋಜನೆ</td><td>5.322</td></tr>
<tr><td>MAC</td><td>25.100</td></tr>
<tr><td rowspan="2">2.</td><td rowspan="2">2017–18</td><td>ಆನೆ ಯೋಜನೆ</td><td>10.080</td></tr>
<tr><td>MAC</td><td>12.808</td></tr>
<tr><td rowspan="2">3.</td><td rowspan="2">2018–19</td><td>ಆನೆ ಯೋಜನೆ</td><td>19.290</td></tr>
<tr><td>MAC</td><td>38.920</td></tr>
<tr><td rowspan="2">4.</td><td rowspan="2">2019–20</td><td>ಆನೆ ಯೋಜನೆ</td><td>11.300</td></tr>
<tr><td>MAC</td><td>73.327</td></tr>
<tr><td rowspan="2">5.</td><td rowspan="2">2020–21</td><td>ಆನೆ ಯೋಜನೆ</td><td>2.900</td></tr>
<tr><td>MAC</td><td>16.090</td></tr>
<tr><td colspan="2" rowspan="2">ಒಟ್ಟು</td><td>ಆನೆ ಯೋಜನೆ</td><td>48.892</td></tr>
<tr><td>MAC</td><td>166.245</td></tr>
</table>
ಮೇಲ್ಕಂಡ ಕಾಮಗಾರಿಗಳು ಆಯಾ ಆರ್ಥಿಕ ವರ್ಷಗಳ ಪ್ರಾರಂಭದಿಂದ ಆರಂಭವಾಗುತ್ತವೆ.<br><br>
<u>ಯೋಜನೆಯ ಹೆಸರು:</u> Man-Animal Conflict Measures (2406-02-110- Wildlife Preservation-0-54-Nature Conservation, Wildlife Habitat Management & Man -Animal Conflict Measures - 139 Major Work). ಈ ಕಾಮಗಾರಿಯನ್ನು ಮಳೆಗಾಲ ಮುಗಿದ ನಂತರ ಪ್ರಾರಂಭಿಸಲಾಗುವುದು.</td></tr>
<tr><td>ಇ)</td><td>ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಯೋಜನೆ ಯಾವ ಯಾವ ಭಾಗದಲ್ಲಿ ಅನುಷ್ಠಾನವಾಗುತ್ತದೆ;<br>(ವಿವರ ನೀಡುವುದು)</td><td>ಚಿಕ್ಕಮಗಳೂರು ವೃತ್ತ ವ್ಯಾಪ್ತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.
<table>
<tr><th>ಕ್ರ.ಸಂ.</th><th>ವಿಭಾಗ</th><th>ವಲಯ</th></tr>
<tr><td>1</td><td rowspan="5">ಚಿಕ್ಕಮಗಳೂರು</td><td>ಮೂಡಿಗೆರೆ</td></tr>
<tr><td>2</td><td>ಕಡೂರು</td></tr>
<tr><td>3</td><td>ಚಿಕ್ಕಮಗಳೂರು</td></tr>
<tr><td>4</td><td>ಮುತ್ತೋಡಿ</td></tr>
<tr><td>5</td><td>ಆಲ್ದೂರು</td></tr>
<tr><td>6</td><td rowspan="4">ಕೊಪ್ಪ</td><td>ಕೊಪ್ಪ</td></tr>
<tr><td>7</td><td>ಶೃಂಗೇರಿ</td></tr>
<tr><td>8</td><td>ಮೂಡಿಗೆರ</td></tr>
<tr><td>9</td><td>ನರಸಿಂಹರಾಜಪುರ</td></tr>
</table></td></tr>
</table>